## ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

**ಸಿ.ಸಿ. ನಂ: 1262/2022**

| | | | |
|---|---|---|---|
| ಸಾಕ್ಷಿಯ ಹೆಸರು | : ಜಗದೀಶ | ಸಿ.ಡಬ್ಲ್ಯೂ | : 12 |
| ತಂದೆ ಹೆಸರು | : ಕುಮಾರ | ಪಿ.ಡಬ್ಲ್ಯೂ | : 06 |
| ವಯಸ್ಸು | : 36 ವರ್ಷ | ಪ್ರಮಾಣೀಕರಿಸಿದ ದಿ: | 14.05.2026 |
| ವಾಸ | : ಟಿ ಮಾಯಗೌಡನ ಹಳ್ಳಿ | | |
| ವೃತ್ತಿ | : ರೈತ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಎ.ಪಿ.ಪಿ.ಯವರಿಂದ:

ನನಗೆ ಈ ಪ್ರಕರಣದ ಬಗ್ಗೆ ಏನು ತಿಳಿದಿಲ್ಲ. ಸುಮಾರು 2 – 3 ವರ್ಷಗಳ ಹಿಂದೆ ಪೊಲೀಸರು ನನ್ನಿಂದ ಒಂದು ದಾಖಲೆಗೆ ನಗರ ಠಾಣೆಯಲ್ಲಿ ಸಹಿ ಪಡೆದಿರುತ್ತಾರೆ. ಸದರಿ ದಾಖಲೆ ಏನೆಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿ ಪಿ 7 ಅಪಘಾತ ವಾಹನದ ಅಮಾನತ್ ಮಹಜರ್ ನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸಹಿಯನ್ನು ನಿ ಪಿ 7 (ಬಿ) ಎಂದು ಗುರುತಿಸಲಾಯಿತು.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅಮಾನತ್ ಮಹಜರ್ ನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಎ.ಪಿ.ಪಿ. ರವರಿಂದ:

ದಿನಾಂಕ 16.08.2022 ರಂದು ಹೊಳೆನರಸೀಪುರ ನಗರ ಪೊಲೀಸ್ ಠಾಣಾ ಮುಂಭಾಗ ನನ್ನನ್ನು ಮತ್ತು ಚಾ ಸಾ 11 ಬರಮಾಡಿಕೊಂಡು, ಚಾ ಸಾ 17 ರವರು ಹಾಜರಿಸಿದ ಅಪಘಾತ ಪಡಿಸಿದ್ದ ವಾಹನವನ್ನು ಚಾ ಸಾ 21 ರವರು ಪರಿಶೀಲಿಸಲಾಗಿ ಸದರಿ ವಾಹನವು ಕಪ್ಪು ಬಣ್ಣದ ಕೆ ಎ 13 ಇಇ 1996 ರ ಹಿರೋ ಹೊಂಡಾ ಸ್ಪಂಡರ್ ಪ್ಲಸ್ ಮೋಟಾರ್ ವೆಹಿಕಲ್ ಆಗಿದ್ದು ಸದರಿ ವಾಹದ ಮುಂಭಾಗ ಮತ್ತು ಹಿಂಭಾಗದಲ್ಲಿ ನಂಬರ್ ಪ್ಲೇಟ್ ಇದ್ದು, ಮುಂಭಾಗದ ನಂಬರ್ ಪ್ಲೇಟ್ ಬೆಂಡಾಗಿದ್ದು, ಎರಡು ಕಡೆಯ ಇಂಡಿಕೇಟರ್ ಜಖಂ ಆಗಿದ್ದು, ಎಡಭಾಗದ ಕ್ಲಚ್ ಜಖಂ ಆಗಿದ್ದು, ಎಡಭಾಗದ ಸೇಫ್ಟೀ ಗಾರ್ಡ್ ಬೆಂಡಾಗಿದ್ದು, ಬಲಭಾಗದ ಸೇಫ್ಟೀಗಾರ್ಡ್ ಉಜ್ಜಿದ್ದು, ಮಾಸ್ಕ್ ಜಖಂಗೊಂಡಿತ್ತು, ಎಡಭಾಗದ ಗೇರ್ ಬೆಂಡಾಗಿತ್ತು, ಅದನ್ನು ಚಾ ಸಾ 21 ರವರು ನಮ್ಮ ಸಮಕ್ಷಮ ಸಂಜೆ 5.00 ರಿಂದ 6.00 ರವರಗೆ ಮುಂದಿನ ತನಿಖೆಗಾಗಿ ವಶಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ.

ಎಲ್ಲಾ ವಿಷಯ ತಿಳಿದಿದ್ದರೂ ಸಹ ನ್ಯಾಯಾಲಯದಲ್ಲಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ಪರ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ